No. of Printed Pages : **2**

# 21L1FK4

## All Degree IV Semester Degree Examination, September/October- 2023

## FUNCTIONAL KANNADA

### Paper No. 04 : (Saralagannada)-04

### (NEP)

Time : 2 Hours | Maximum Marks : 60

***ಸೂಚನೆ :*** *ಭಾಷೆ ಹಾಗೂ ಬರಹದ ಶುದ್ಧಿಗೆ ಗಮನ ಕೊಡಲಾಗುವುದು.*

**1.** ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ. **10x1=10**

(a) 'ಶ್ರಾವಣ' ಕವಿತೆಯನ್ನು ಯಾರು ರಚಿಸಿದ್ದಾರೆ ?

(b) 'ಶ್ರಾವಣ' ಕವಿತೆಯನ್ನು ಯಾವ ಸಂಕಲನದಿಂದ ಆಯ್ಕೆ ಮಾಡಿಕೊಳ್ಳಲಾಗಿದೆ ?

(c) ಎ.ಎನ್. ಮೂರ್ತಿರಾವ್ ಅವರು ಯಾರನ್ನು ಕುರಿತು ಲೇಖನವನ್ನು ಬರೆದಿದ್ದಾರೆ ?

(d) ಬಸ್‌ನಲ್ಲಿ ಪ್ರಯಾಣ ಮಾಡುವ ಸಹಪ್ರಯಾಣಿಗ ತೆಗೆದ ಉದ್ಗಾರವೇನು ?

(e) ಶಿವರಾಮ ಕಾರಂತರ ಪ್ರವಾಸ ಕಥನ–ಲೇಖನದ ಶೀರ್ಷಿಕೆ ಏನು ?

(f) ಹಂಪಿಯ ತುಂಗಭದ್ರಾ ನದಿಯನ್ನು ದಾಟುವಾಗ ಶಿವರಾಮ ಕಾರಂತರಿಗೆ ಆದ ಅನುಭವ ಏನು ?

(g) ಗೊರೂರು ರಾಮಸ್ವಾಮಿ ಅಯ್ಯಂಗಾರರ ಲೇಖನದ ಹೆಸರೇನು ?

(h) ಎಮ್ಮೆಯ ಹಾಲು ರಾಜಸವೆಂದು ಮೆಚ್ಚಲು ಕಾರಣವೇನು ?

(i) 'ಅಣ್ಣಪ್ಪನ ರೇಶ್ಮೆ ಕಾಯಿಲೆ' – ಯಾವ ಸಂಕಲನದಿಂದ ಆಯ್ಕೆ ಮಾಡಿಕೊಳ್ಳಲಾಗಿದೆ ?

(j) ಅಣ್ಣಪ್ಪನ ದೇಹಸ್ಥಿತಿಯು ಕುವೆಂಪು ಅವರ ಕಣ್ಣಿಗೆ ಹೇಗೆ ಕಂಡಿತು ?

**2.** ಈ ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. **5x2=10**

(a) ಕನ್ನಡ ನಾಡಿನ ಅಭಿವೃದ್ಧಿಗೆ ವಿಶ್ವೇಶ್ವರಯ್ಯನವರು ಮಾಡಿದ ಕೆಲಸಗಳೇನು ?

(b) ಶ್ರಾವಣಮಾಸದಲ್ಲಿ ಊರು ಮತ್ತು ಮನೆಗಳಲ್ಲಿ ಆಗುವ ಬದಲಾವಣೆಗಳನ್ನು ಕವಿ ಬೇಂದ್ರೆಯವರು ಹೇಗೆ ವರ್ಣಿಸಿದ್ದಾರೆ ?

(c) ಅಣ್ಣಪ್ಪ ಹೇಳುವ ಓಡುಹುಳು ಕತೆ ಏನು ?

(d) ಶಿವರಾಮ ಕಾರಂತರು ತಮ್ಮ ಬಾಲ್ಯದಲ್ಲಿ ಕಲ್ಯಾಣಪುರ ಹೊಳೆಯಲ್ಲಿ ಮಾಡಿದ ದೋಣಿ ಪಯಣದ ಅನುಭವವನ್ನು ಹೇಗೆ ವಿವರಿಸುತ್ತಾರೆ ?

(e) ಐವರು ಹುಡುಗಿಯರು ಇದ್ದಕ್ಕಿದ್ದಂತೆ ಹೇಗೆ ನಾಪತ್ತೆಯಾಗುತ್ತಾರೆ ?

**3.** ಈ ಕೆಳಗಿನ ಪ್ರಶ್ನೆಗಳನ್ನು ವಿವರಿಸಿರಿ. **4x5=20**

(a) ಆನೆ ಹಳ್ಳದಲ್ಲಿದ್ದ ಹುಡುಗಿಯರನ್ನು ಪತ್ತೆ ಮಾಡಿದ ರೀತಿ ಯಾವುದು ?

(b) ಗೊರೂರು ರಾಮಸ್ವಾಮಿ ಅಯ್ಯಂಗಾರರು ತಮ್ಮ ಹೆಂಡತಿ ಊರಿಗೆ ಹೋದಾಗ ಎಮ್ಮೆಗೆ ಮಾಡಿದ ಮೋಸ ಎಂತಹದು ?

(c) ಗುಡ್ಡಗಳನ್ನು ಆವರಿಸಿರುವ ಮೋಡಗಳು ಕವಿ ಬೇಂದ್ರೆಯವರ ಕಣ್ಣಿಗೆ ಹೇಗೆ ಕಂಡಿವೆ ?

(d) ದಿವಾನರಾಗಿ ನೇಮಕರಾದಾಗ ವಿಶ್ವೇಶ್ವರಯ್ಯನವರು ತಮ್ಮ ತಾಯಿಗೆ ಹೇಳಿದ ಮಾತೇನು ? ವಿಶ್ಲೇಷಿಸಿರಿ.

**4.** ಈ ಕೆಳಗಿನ ಪ್ರಶ್ನೆಗಳಿಗೆ ವಿವರಿಸಿ ಬರೆಯಿರಿ. **2x10=20**

(a) ಶ್ರಾವಣ–ಕವಿತೆಯನ್ನು ವಿಶ್ಲೇಷಿಸಿ ಬರೆಯಿರಿ.

(b) ರಾಮಮೂರ್ತಿ ಪಂಚಕನ್ಯೆಯರನ್ನು ಹೇಗೆ ಟೀಕಿಸಿದನು ವಿವರಿಸಿರಿ.

**- o 0 o -**